# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ಹಿರಿಯೂರು.

## ಸಿ.ಸಿ ಸಂಖ್ಯೆಃ 60/2024

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಜಿ. ಮಂಜುನಾಥ | ಸಿಡಬ್ಲ್ಯೂ-14 |
| ತಂದೆಯ/ಗಂಡನ ಹೆಸರು | - | ಗಂಗಾಧರಪ್ಪ | ಪಿಡಬ್ಲ್ಯೂ-6 |
| ವಯಸ್ಸು | - | 58 ವರ್ಷ | ಪ್ರ.ವ.ಬೋ<br>ದಿನಾಂಕಃ20.02.2026 |
| ಉದ್ಯೋಗ | - | ಸಹಾಯಕ ಉಪ ನಿರೀಕ್ಷಕರು,<br>ಪರಶುರಾಂಪುರ ಪೊಲೀಸ್ ಠಾಣೆ | |
| ವಾಸ | - | ಪರಶುರಾಂಪುರ | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ-**

1. ನಾನು ಜೂನ್-2023 ರಿಂದ ನವೆಂಬರ್-2025 ರವರೆಗೆ ಅಬ್ಬಿನಹೊಳೆ ಪೊಲೀಸ್ ಠಾಣೆಯಲ್ಲಿ, ಸಹಾಯಕ ಉಪನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕಃ13.09.2023 ರಂದು ನಾನು ಪೊಲೀಸ್ ಠಾಣೆ ಪ್ರಭಾರದಲ್ಲಿದ್ದಾಗ ರಾತ್ರಿ 8.30 ಗಂಟೆ ಸಮಯದಲ್ಲಿ ಚಾಸಾ-1 ರವರು ಪೊಲೀಸ್ ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ನಿಪಿ-1 ರಂತೆ ಸ್ವೀಕರಿಸಿಕೊಂಡು ಅದರ ಆಧಾರದ ಮೇಲೆ ಠಾಣಾ ಮೊಕದ್ದಮೆ ಸಂಖ್ಯೆ157/2023 ರಂತೆ ಪ್ರಕರಣ ದಾಖಲು ಮಾಡಿಕೊಂಡಿರುತ್ತೇನೆ. ನಿಪಿ-1 ರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-1(ಬಿ)** ಎಂದು ಗುರುತಿಸಲಾಯಿತು. ಸಾಕ್ಷಿ ನೋಡಿ ಗುರುತಿಸಿದ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ಘನ ನ್ಯಾಯಾಲಯಕ್ಕೂ ಮತ್ತು ನಮ್ಮ ಇಲಾಖಾ ಮೇಲಾಧಿಕಾರಿಗಳಿಗೂ ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿಗೆ ಪ್ರಥಮ ವರ್ತಮಾನ ವರದಿಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ **ನಿಪಿ-10** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-10(ಎ)** ಎಂದು ಗುರುತಿಸಲಾಯಿತು.

3. ದಿನಾಂಕಃ14.09.2023 ರಂದು ಬೆಳಿಗ್ಗೆ 9.00 ಗಂಟೆಗೆ ಕೃತ್ಯ ನಡೆದ ಸ್ಥಳವಾದ ಹಿರಿಯೂರು ತಾಲೂಕು ಶ್ರವಣಗೆರೆ ಗ್ರಾಮದ ಭಾರತ್ ಮಾತಾ ಶಾಲೆಯ ಹತ್ತಿರ ಚಾಸಾ-1 ರವರು

ತೋರಿಸಿದ ಸ್ಥಳದಲ್ಲಿ ಘಟನಾ ಸ್ಥಳಕ್ಕೆ ಪಂಚರಾದ ಚಾಸಾ-3 ಮತ್ತು 4 ರವರನ್ನು ಬರಮಾಡಿಕೊಂಡು ಅವರಿಗೆ ಪಂಚನಾಮೆಗೆ ಸಹಕರಿಸುವಂತೆ ಕೋರಿ ನೋಟೀಸ್ ನೀಡಿರುತ್ತೇನೆ. ಸಾಕ್ಷಿ ನೋಡಿ ಗುರುತಿಸಿದ ನೋಟೀಸ್ ನ್ನು **ನಿಪಿ-11** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-11(ಎ)** ಎಂದು ಗುರುತಿಸಲಾಯಿತು. ನಂತರ ಚಾಸಾ-1 ರವರು ತೋರಿಸಿಕೊಟ್ಟಂತೆ ಪಂಚರ ಸಮಕ್ಷಮ ನಿಪಿ-2 ರಂತೆ ಸ್ಥಳ ಪಂಚನಾಮೆಯನ್ನು ಮತ್ತು ನಿಪಿ-3 ರಂತೆ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ನಿಪಿ-2 ಮತ್ತು 3 ರಲ್ಲಿರುವ ಸಾಕ್ಷಿಯ ಸಹಿಗಳನ್ನು **ನಿಪಿ-2(ಡಿ) ಮತ್ತು ನಿಪಿ-3(ಡಿ)** ಎಂದು ಗುರುತಿಸಲಾಯಿತು. ಪಂಚನಾಮೆ ಕಾಲದಲ್ಲಿ ಅಪಘಾತಕ್ಕೊಳಗಾಗಿದ್ದ ಮೋಟಾರ್ ಸೈಕಲ್ ಸಂಖ್ಯೆಕೆಎ-05-ವೈ-1915 ನೇದ್ದನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ನಂತರ ಠಾಣೆಗೆ ಮರಳಿ ಬಂದು ವಶಪಡಿಸಿಕೊಂಡ ಮೋಟಾರ್ ಸೈಕಲ್ ನ್ನು ಠಾಣಾ ಮಾಲುಪಟ್ಟಿ ಸಂಖ್ಯೆ110/2023 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿ ನೋಡಿ ಗುರುತಿಸಿದ ಠಾಣಾ ಮಾಲುಪಟ್ಟಿಯನ್ನು **ನಿಪಿ-12** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-12(ಎ)** ಎಂದು ಗುರುತಿಸಲಾಯಿತು.

4. ಅದೇ ದಿನ ಚಾಸಾ-3 ಮತ್ತು 4 ರವರ ಸಮಕ್ಷಮ ಅಬ್ಬಿನಹೊಳೆ ಪೊಲೀಸ್ ಠಾಣೆ ಆವರಣದಲ್ಲಿ ಬೆಳಿಗ್ಗೆ 11.00 ಗಂಟೆಯಿಂದ 12.00 ಗಂಟೆವರೆಗೆ ನಿಪಿ-4 ರಂತೆ ವಾಹನ ಅಮಾನತ್ತು ಪಂಚನಾಮೆಯನ್ನು ಜರುಗಿಸಿರುತ್ತೇನೆ. ನಿಪಿ-4 ರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-4(ಡಿ)** ಎಂದು ಗುರುತಿಸಲಾಯಿತು. ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-15 ರವರಿಗೆ ಹಸ್ತಾಂತರಿಸಿರುತ್ತೇನೆ.

**ಪಾಟೀ-ಸವಾಲುಃ ಆರೋಪಿತರ ಪರ ಶ್ರೀ ಆರ್.ಬಿ.ಆರ್. ವಕೀಲರಿಂದಃ-**

5. ಪಿರ್ಯಾದುದಾರರಿಗೆ ಅನುಕೂಲ ಮಾಡಿಕೊಡಲು ಸುಳ್ಳು ದೂರು ಸ್ವೀಕರಿಸಿ ಠಾಣಾ ಅಂಕಿ ಅಂಶಗಳಿಗೋಸ್ಕರ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಅಪಘಾತ ಸ್ಥಳಕ್ಕೆ ಹೋಗಿಲ್ಲ, ಯಾವುದೇ ಪಂಚನಾಮೆ ಮತ್ತು ನಕಾಶೆ ತಯಾರಿಸಿಲ್ಲ ಮತ್ತು ಯಾವುದೇ

ವಾಹನಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಪಂಚರಿಗೆ ಪಂಚನಾಮೆಗೆ ಬರಲು ನೋಟೀಸ್ ನೀಡಿಲ್ಲ ಎಂದರೆ ಸರಿಯಲ್ಲ. ಪಂಚನಾಮೆ ಮತ್ತು ನಕಾಶೆಯನ್ನು ಠಾಣೆಯಲ್ಲಿ ಕುಳಿತು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಸಿ/ಸಿ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.